INFORMATON ABOUT I PUC ONLINE RESULT

1) ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಯ ಅಂಕಗಳನ್ನು ವಿಷಯವಾರು online portal (ಸುವಿಧ್ಯಾ) ನಲ್ಲಿ ತುಂಬಿಸಲು ಕೊನೆಯ ದಿನಾಂಕ 05-03-2018

2) Final submit ಆದನಂತರ ಯಾವುದೇ ತಿದ್ದುಪಡಿಗೆ ಅವಕಾಶವಿರುವುದಿಲ್ಲ. ಆದುದರಿಂದ final submit ಕೊಡುವ ಮೊದಲೇ ಕಾಲೇಜು ಹಂತದಲ್ಲಿ ತಿದ್ದುಪಡಿ ಮಾಡಲು ಗರಿಷ್ಟ ಮಿತಿ ಅವಕಾಶವಿರುತ್ತದೆ.

3) Final submit ಆದನಂತರ ಅನುಬಂಧ 1,2,3,4 ಇವುಗಳನ್ನು download ಮಾಡಿಕೊಂಡು ಮುದ್ರಿಸಿ ಪ್ರಾಚಾರ್ಯರ ಸಹಿ ಮತ್ತು ಮುದ್ರೆಯೊಂದಿಗೆ ಕ್ರೋಢೀಕೃತ ಅಂಕ ವಹಿ ಸಮೇತ ನೋಡಲ್ ಕೇಂದ್ರಗಳಿಗೆ ಪರಿಶೀಲನೆಗೆ ಸಲ್ಲಿಸುವುದು.

4) ದಿನಾಂಕ 05-03-2018ರಿಂದ 08-03-2018ರ ಒಳಗೆ ನೋಡಲ್ ಕೇಂದ್ರಗಳಲ್ಲಿ ಪರಿಶೀಲನೆಗೆ ಅವಕಾಶವಿರುತ್ತದೆ. ಪರಿಶೀಲನೆಯ ಸಮಯದಲ್ಲಿ ಇಲಾಖೆಯಿಂದ ಅನುಮತಿ ನೀಡಿದ ವಿಷಯ ಮತ್ತು ಸಂಯೋಜನೆಗಳ ಶೈಕ್ಷಣಿಕ ಮಾನ್ಯತೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

5) ನೋಡಲ್ ಕೇಂದ್ರದವರಿಗೆ ತಮ್ಮ tagged college ಗಳ ಅಂಕವಹಿಯನ್ನು ಮತ್ತು online ನಲ್ಲಿ ನಮೂದಿಸಿದ ಅಂಕಗಳನ್ನು ಪರಿಶೀಲಿಸಲು ಪ್ರತ್ಯೇಕ user ID ಮತ್ತು login password ನ್ನು ತತ್ರಾಂಶ ತಯಾರಕರು ದಿನಾಂಕ 02-03-2018ರ ಒಳಗಾಗಿ ತಮ್ಮ ಮೊಬೈಲ್ ಫೋನ್‌ಗಳಿಗೆ ಕಿರು ಸಂದೇಶವನ್ನು ಕಳುಹಿಸಲಾಗುವುದು.

6) ನೋಡಲ್ ಕೇಂದ್ರದವರು ದಿನಾಂಕ 05-03-2018ರ ನಂತರ tagged collge ಗಳ ಕ್ರೋಢೀಕೃತ ಅಂಕವಹಿ, ಅನುಬಂಧ 1,2,3,4 ನ್ನು ಮತ್ತು online ನಲ್ಲಿ ನಮೂದಿಸಿದ ಅಂಕಗಳನ್ನು ಪರಿಶೀಲಿಸುವ ಮೊದಲು ಕಡ್ಡಾಯವಾಗಿ ಅವರಿಗೆ ಮಂಜೂರಾದ ಭಾಷೆ ಮತ್ತು ಸಂಯೋಜನೆಗಳನ್ನು ಪರಿಶೀಲಿಸಿ ಅನುಮೋದನೆ ನೀಡುವುದು.

7) ನೋಡಲ್ ಕೇಂದ್ರಗಳಲ್ಲಿ ಪರಿಶೀಲಿಸಿದ ಫಲಿತಾಂಶ ಪಟ್ಟಿಯು online ನಲ್ಲಿ ಅನುಮೋದನೆಗಾಗಿ ಉಪನಿರ್ದೇಶಕರ ಕಛೇರಿಗೆ ರವಾನೆಯಾಗುತ್ತದೆ.

8) ಕಾಲೇಜಿನವರು ದಿನಾಂಕ 08-03-2018ರಿಂದ 15-03-2018 ರೊಳಗಾಗಿ ಉಪನಿರ್ದೇಶಕರಿಂದ ಅಂತಿಮ ಫಲಿತಾಂಶವನ್ನು ಅನುಮೋದಿಸುವುದು.

9) ಅನುಮೋದನೆಯ ಸಂದರ್ಭದಲ್ಲಿ ಕ್ರೋಢೀಕೃತ ಅಂಕವಹಿ ಮತ್ತು ಅನುಬಂಧ 1,2,3,4 ನ್ನು ಸಲ್ಲಿಸಿ ಫಲಿತಾಂಶವನ್ನು ಅನುಮೋದಿಸಿಕೊಳ್ಳುವುದು.

10) ನೋಡಲ್ ಕೇಂದ್ರದವರು ತಮ್ಮ ಕಾಲೇಜಿನ ಫಲಿತಾಂಶವನ್ನು ಪರಿಶೀಲನೆಗೆ ಮತ್ತು ಅನುಮೋದನೆಗೆ ನೇರವಾಗಿ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

ಉಪನಿರ್ದೇಶಕರು
ಪದವಿಪೂರ್ವ ಶಿಕ್ಷಣ ಇಲಾಖೆ, ದ.ಕ.ಜಿಲ್ಲೆ
ರಥಬೀದಿ, ಮಂಗಳೂರು-575001